**<u>ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಪ್ರ.ದ.ನ್ಯಾದಂ., ರವರ ನ್ಯಾಯಾಲಯ, ತರೀಕೆರೆ</u>**

**<u>ಸಿ.ಸಿ.ನಂಃ 650/2024</u>**

**<u>ಫಿರ್ಯಾದುದಾರುಃ</u>** ಸರ್ಕಾರದ ಪರವಾಗಿ ಅಜ್ಜಂಪುರ ಪೊಲೀಸರು

:**ವಿರುದ್ಧ**:

**<u>ಆರೋಪಿ:</u>** ಶ್ರೀ ಮಂಜುನಾಥ.ವಿ.ಎಸ್,
ಬಿನ್ ಶ್ರೀ ಸಿದ್ದಪ್ಪ,
ವಯಸ್ಸು 63 ವರ್ಷಗಳು,
ವಾಸಃ ಗೊಪ್ಪೇನಹಳ್ಳಿ ಗ್ರಾಮ,
ಚೆನಗಿರಿ ತಾಲ್ಲೂಕು,
ದಾವಣಗೆರೆ ಜಿಲ್ಲೆ.

**<u>ಆಪಾದನೆಯ ಸಾರಾಂಶ</u>**

ಶ್ರೀ. ರಾಹುಲ್ ಶೆಟ್ಟಿಗಾರ್, ಬಿ.ಕಾಂ.(Hons.), ಎಲ್‌ಎಲ್.ಬಿ., ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ ಪ್ರ.ದ.ನ್ಯಾದಂ., ತರೀಕೆರೆ ಆದ ನಾನು ಆರೋಪಿಯಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ದಿನಾಂಕ 27.03.2024 ರಂದು ಮಧ್ಯಾಹ್ನ 12.00 ಗಂಟೆ ಸಮಯದಲ್ಲಿ ಅಜ್ಜಂಪುರ ಪೋಲೀಸ್ ಠಾಣಾ ಸರಹದ್ದಿನ ಅಜ್ಜಂಪುರದಿಂದ ಬುಕ್ಕಾಂಬೂದಿ ಕಡೆ ಹೋಗುವ ಎಸ್.ಹೆಚ್.76 ರ ರಾಜ್ಯ ಹೆದ್ದಾರಿಯ ಹೀರೆಕಾನವಂಗಲ ಗೇಟ್ ಬಳಿ ನೀವು ಆರೋಪಿ ಅಜ್ಜಂಪುರದ ಕಡೆಯಿಂದ ಬುಕ್ಕಾಂಬೂದಿ ಕಡೆಗೆ ಕೆಎ.17.ಎಂಎ.4393 ರ ಮಹೇಂದ್ರ ಬುಲೇರೋ ಜೀಪನ್ನು ಅತಿವೇಗ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಜೀಪನ್ನು ನಿಯಂತ್ರಿಸಲಾಗದೆ ರಸ್ತೆಯ ಬದಿಯ ಪುಟ್‌ಪಾತ್ ಮೇಲೆ ಹತ್ತಿಸಿ ಪಲ್ಟಿಹೊಡೆಸಿ ಹೀರೆಕಾನವಂಗಲದಿಂದ ಸಿದ್ದಾಪುರಕ್ಕೆ ಹೋಗುವ ರಸ್ತೆಯ ಬಳಿ ರಸ್ತೆ ಎಡಭಾಗದಲ್ಲಿ ಕೆಎ.66 ಇ.9903 ರ ಹೋಂಡಾ ಕಂಪನಿಯ ಸ್ಕೂಟಿಯನ್ನು ನಿಲ್ಲಿಸಿಕೊಂಡು ನಿಂತಿದ್ದ ಅರ್ಜುನ ಮತ್ತು ಶ್ವೇತಾ ರವರಿಗೆ ಡಿಕ್ಕಿಹೊಡೆಸಿರುತ್ತೀರಿ. ಈ ರೀತ್ಯ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ 279 ರ ಅನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ.

ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯಾದ ನೀವು ಕೆಎ.17.ಎಮ್ಎ.4393 ರ ಮಹೇಂದ್ರ ಬುಲೇರೋ ಜೀಪನ್ನು ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಕೆಎ.66 ಇ.9903 ರ ಹೋಂಡಾ ಕಂಪನಿಯ ಸ್ಕೂಟಿಯನ್ನು ನಿಲ್ಲಿಸಿಕೊಂಡು ನಿಂತಿದ್ದ ಅರ್ಜುನ ಮತ್ತು ಶ್ವೇತಾ ರವರಿಗೆ ಡಿಕ್ಕಿ ಹೊಡೆಸಿದ ಪರಿಣಾಮ ಸ್ಕೂಟಿಯಿಂದ ಕೆಳಗೆ ಡಾರು ರಸ್ತೆಗೆ ಬಿದ್ದ ಅರ್ಜುನ್ ರವರ ತಲೆಗೆ ಹಾಗೂ ಮೈಕೈಗೆ ಮತ್ತು ಶ್ವೇತಾ ರವರ ತಲೆಗೆ ಬಲವಾದ ಪೆಟ್ಟುಬಿದ್ದು ಮೃತಪಟ್ಟಿರುತ್ತಾರೆ. ಈ ರೀತ್ಯ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ 304(ಎ) ರ ಅನ್ವಯ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಮಾಡಿರುತ್ತೀರಿ ಎಂದು ಆಪಾದಿಸಲಾಗಿದೆ.

**ಪ್ರಶ್ನೆ:1–** ಈಗ ಮೇಲೆ ಓದಿ ಹೇಳಿದ ಆಪಾದನೆಯನ್ನು ಕೇಳಿದ್ದೀರಾ? ಅದು ನಿಮಗೆ ಅರ್ಥವಾಯಿತೇ?

ಉತ್ತರಃ Yes

**ಪ್ರಶ್ನೆ:2–** ನೀವು ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ನಿಮಗೆ ಯಾವುದಾದರೂ ಪ್ರತಿರಕ್ಷಣೆ ಇದೆಯೇ ?

**ಉತ್ತರಃ** Pleaded not guilty and claimed to be tried

(ಈ ಮೇಲ್ಕಂಡ ಅಪಾದನೆಯನ್ನು ನಾನೇ ಸ್ವತಃ ಆರೋಪಿತರಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ.)

**ದಿನಾಂಕಃ 22.02.2025.**

ಸಹಿ/-

**(ರಾಹುಲ್ ಶೆಟ್ಟಿಗಾರ್)**
**ಸಿವಿಲ್ ನ್ಯಾಯಾಧೀಶರು ಮತ್ತು ಹೆಚ್ಚುವರಿ**
**ಪ್ರ.ದ.ನ್ಯಾದಂ., ತರೀಕೆರೆ**

**ಆರೋಪಿಯ ಸಹಿಃ**